# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು

**ಸಿ.ಸಿ 953–2014** **ಸಿ. ಡಬ್ಲ್ಯುಃ 03**

**ಪಿ. ಡಬ್ಲ್ಯುಃ 02**

| | |
|---|---|
| ಸಾಕ್ಷಿದಾರರ ಹೆಸರು<br>ತಂದೆಯ / ಗಂಡನ ಹೆಸರು<br>ವಯಸ್ಸು<br>ಕೆಲಸ<br>ವಾಸ | ಸುರೇಶ ಬಿ.ಎಸ್<br>ಸೋಮಶೇಖರ ಬಿ.ಸಿ<br>42 ವರ್ಷ<br>ಮುಖ್ಯ ಪೇದೆ, ಬೈಲುಕುಪ್ಪ ಪೊಲೀಸ್ ಠಾಣೆ<br>ಬೈಲುಕುಪ್ಪ |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ** 22–04–2025. |

**ಮುಖ್ಯ ವಿಚಾರಣೆಃ  ಶ್ರೀ ಎಪಿಪಿ   ವಕೀಲರಿಂದಃ**

ನಾನು ಜನವರಿ 2009 ರಿಂದ 2014 ನೇ ಜುಲೈ ವರೆಗೆ ನಂಜನಗೂಡು ಪಟ್ಟಣ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿ.05–02–2014 ರಂದು ನಾನು ಠಾಣೆಯಲ್ಲಿದ್ದಾಗ ಚಾಸಾ–1 ರವರಿಗೆ ಬಂದ ಬಾತ್ಮಿ ಮೇರೆಗೆ ನನ್ನನ್ನು ಮತ್ತು ಚಾಸಾ–2,4 ರಿಂದ 13 ಮತ್ತು ಪಂಚರಾದ ಚಾಸಾ–15 ಮತ್ತು 16 ರವರುಗಳನ್ನು ಬರಮಾಡಿಕೊಂಡು ಬಾತ್ಮಿ ವಿಚಾರ ತಿಳಿಸಿ ನಂಜನಗೂಡು ಪಟ್ಟಣದ ಆರ್.ಪಿ ರಸ್ತೆಯ  20 ನೇ ಕ್ರಾಸ್‌ನಲ್ಲಿರುವ ಶ್ರೀ ಶ್ರೀಕಂಠೇಶ್ವರ ವಸತಿಗೃಹ ಲಾಡ್ಜ್ ಮೇಲೆ ದಾಳಿ ಮಾಡಿದ್ದು, ಆ ಸಮಯ ನಮ್ಮೊಂದಿಗೆ ಪಂಚರಾದ ಚಾಸಾ–15 ಮತ್ತು 16

ರವರು ಇದ್ದರು. ನಾನು, ಚಾಸಾ-1, 18, 2, 4 ರಿಂದ 13 ಮತ್ತು 15 ಮತ್ತು 16 ರವರು ನಮ್ಮ ಇಲಾಖಾ ಜೀಪುಗಳಲ್ಲಿ ಶ್ರೀ ಶ್ರೀಕಂಠೇಶ್ವರ ವಸತಿಗೃಹ ಲಾಡ್ಜ್ ಗೆ ಹೋಗಿದ್ದು ನಮ್ಮಗಳ ಸಮಕ್ಷಮ ದಿ.06-02-2014 ರಂದು ಬೆಳಗಿನ ಜಾವ 00.10 ಗಂಟೆಗೆ ಹೋಗಿ ನೋಡಲಾಗಿ ಲಾಡ್ಜ್ ನ ಒಳಭಾಗ ಇದ್ದ ಮ್ಯಾನೇಜರ್ ಆದ ಆರೋಪಿ ನಟರಾಜು ನಾವು ಬರುವುದನ್ನು ನೋಡಿ ಓಡಿ ಹೋಗಿರುತ್ತಾನೆ. ನಂತರ ಅಲ್ಲೇ ರೂಂ ಬಾಯ್ ಆದ ರವಿಕುಮಾರ್ ಜೊತೆ ರೂಮುಗಳನ್ನು ಪರಿಶೀಲಿಸಲು ರೂಂ.ನಂ.108 ರ ಬಾಗಿಲನ್ನು ತೆಗೆಸಿ ಒಳ ಪ್ರವೇಶಿಸಿ ಪರಿಶೀಲಿಸಲಾಗಿ ಅದರಲ್ಲಿ ಒಬ್ಬ ಗಂಡು ಮತ್ತು ಹೆಂಗಸು ಇದ್ದು ಇವರುಗಳು ಅರೆಬಟ್ಟೆ ಅವಸ್ಥೆಯಲ್ಲಿ ಇದ್ದು ಇವರುಗಳು ಅಕ್ರಮವಾಗಿ ವ್ಯಭಿಚಾರದಲ್ಲಿ ತೊಡಗಿರುವುದು ಕಂಡಬಂದಿತು. ಅವರು ಹೆಸರು ಕೇಳಲಾಗಿ ಏಜಾಜ್, ಉದಯಗಿರಿ, ಮೈಸೂರು ಎಂದು ತಿಳಿಸಿದ್ದು, ಆನತ ಜೊತೆ ಇದ್ದ ಹೆಂಗಸಿನ ಹೆಸರು ಕೇಳಲಾಗಿ ಗೀತಾ, ಮಂಡ್ಯದ ಕೊಪ್ಪಲು ಗ್ರಾಮ, ಶ್ರೀರಂಗಪಟ್ಟಣ ತಾಲ್ಲೂಕು ಎಂದು ತಿಳಿಸಿದಳು. ನಂತರ ರೂಂ.ನಂ.110 ಅನ್ನು ಪರಿಶೀಲಿಸಲಾಗಿ ಆ ರೂಮಿನಲ್ಲಿಯೂ ಸಹ ಒಬ್ಬ ಗಂಡು ಮತ್ತು ಹೆಂಗಸು ಸಹ ಅಕ್ರಮವಾಗಿ ವ್ಯಭಿಚಾರದಲ್ಲಿ ತೊಡಗಿರುವುದು ಕಂಡಬಂದಿತು. ಅವರು ಹೆಸರು ಕೇಳಲಾಗಿ ವಿನಯ್ ಕುಮಾರ್, ಆಲನಹಳ್ಳಿ, ಮೈಸೂರು ಎಂದು ತಿಳಿಸಿದ್ದು, ಆನತ ಜೊತೆ ಇದ್ದ ಹೆಂಗಸಿನ ಹೆಸರು ಕೇಳಲಾಗಿ ಸುಮಾ, ಹಂಪಾಪುರ ಗ್ರಾಮ, ಅರಕಲಗೂಡು

ತಾಲ್ಲೂಕು ಎಂದು ತಿಳಿಸಿದಳು. ನಂತರ ರೂಂ.ನಂ.111 ಅನ್ನು ಪರಿಶೀಲಿಸಲಾಗಿ ಆ ರೂಮಿನಲ್ಲಿಯೂ ಸಹ ಒಬ್ಬ ಗಂಡು ಮತ್ತು ಹೆಂಗಸು ಸಹ ಅಕ್ರಮವಾಗಿ ವ್ಯಭಿಚಾರದಲ್ಲಿ ತೊಡಗಿರುವುದು ಕಂಡಬಂದಿತು. ಅವರು ಹೆಸರು ಕೇಳಲಾಗಿ ಗಂಡಸಿನ ಹೆಸರು ಶರಣಪ್ಪ, ಕುತ್ತೂರು ಗ್ರಾಮ, ವಿರಾಜಪೇಟೆ ತಾಲ್ಲೂಕು ಎಂದು ತಿಳಿಸಿದ್ದು, ಆನತ ಜೊತೆ ಇದ್ದ ಹೆಂಗಸಿನ ಹೆಸರು ಕೇಳಲಾಗಿ ಜಯಶೀಲಾ, ಮಂಡ್ಯದ ಕೊಪ್ಪಲು ಗ್ರಾಮ, ಶ್ರೀರಂಗಪಟ್ಟಣ ತಾಲ್ಲೂಕು ಎಂದು ತಿಳಿಸಿದರು. ನಂತರ ರೂಂ.ನಂ.112 ಅನ್ನು ಪರಿಶೀಲಿಸಲಾಗಿ ಆ ರೂಮಿನಲ್ಲಿಯೂ ಸಹ ಒಬ್ಬ ಗಂಡು ಮತ್ತು ಹೆಂಗಸು ಸಹ ಅಕ್ರಮವಾಗಿ ವ್ಯಭಿಚಾರದಲ್ಲಿ ತೊಡಗಿರುವುದು ಕಂಡಬಂದಿತು. ಅವರು ಹೆಸರು ಕೇಳಲಾಗಿ ಗಂಡಸಿನ ಹೆಸರು ಡಿ.ಮೌಲಾನ, ಕೃಷ್ಣರಾಜಪುರಂ, ಬೆಂಗಳೂರು ಎಂದು ತಿಳಿಸಿದ್ದು, ಆನತ ಜೊತೆ ಇದ್ದ ಹೆಂಗಸಿನ ಹೆಸರು ಕೇಳಲಾಗಿ ಸರಸ್ವತಿ, ಅಶೋಕಪುರಂ ಮೈಸೂರು ಎಂದು ತಿಳಿಸಿದರು. ನಂತರ ರೂಂ.ನಂ.113 ಅನ್ನು ಪರಿಶೀಲಿಸಲಾಗಿ ಆ ರೂಮಿನಲ್ಲಿ ಒಬ್ಬ ಹೆಂಗಸು ಮಾತ್ರ ಇದ್ದು ಆಕೆಯ ಹೆಸರು ಕೇಳಲಾಗಿ ಸೋನು ಉರುಫ್ ತನುಜಾ, ಟಿ.ಕಾಟೂರು ಗ್ರಾಮ, ಮೈಸೂರು ತಾಲ್ಲೂಕು ಎಂದು ತಿಳಿಸಿದ್ದು, ಆಕೆಯನ್ನು ವಿಚಾರ ಮಾಡಲಾಗಿ ಆಕೆಯ ಜೊತೆ ಲಾಡ್ಜ್ ನ ಮ್ಯಾನೇಜರ್ ನಟರಾಜು ರವರು ವ್ಯಭಿಚಾರ ನಡೆಸುವುದಾಗಿ ತಿಳಿಸಿರುತ್ತಾರೆ ಎಂದು ತಿಳಿಸಿದರು. ನಂತರ ಘಟನಾ ಸ್ಥಳದಲ್ಲಿ ಪಂಚರ ಸಮಕ್ಷಮ ಬೆಳಗ್ಗೆ 0.10 ರಿಂದ 2.10 ರವರೆಗೆ ಮಹಜರ್ ಕ್ರಮ

ಜರುಗಿಸಲಾಗಿರುತ್ತದೆ. ಸಾಕ್ಷಿಯು ಸ್ಥಳ ಮಹಜರ್ ಅನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ನಂತರ ಚಾಸಾ-1 ರವರು ಆರೋಪಿಗಳು ಮತ್ತು ನೊಂದ ಮಹಿಳೆಯರನ್ನು ಪಟ್ಟಣ ಪೊಲೀಸ್ ಠಾಣೆಗೆ ಕರೆತಂದು ಆರೋಪಿಗಳ ವಿರುದ್ಧ ದೂರು ಸಲ್ಲಿಸಿರುತ್ತಾರೆ. ಸಾಕ್ಷಿಯು ಘಟನಾ ದಿನಾಂಕದಂದು ದಸ್ತಗಿರಿ ಮಾಡಿದ 1 ರಿಂದ 4 ನೇ ಆರೋಪಿತರು ನ್ಯಾಯಾಲಯದ ಮುಂದೆ ಇದ್ದು, ಸಾಕ್ಷಿಯು 1 ರಿಂದ 4 ನೇ ಆರೋಪಿತರುಗಳನ್ನು ನೋಡಿ ಗುರುತಿಸಿರುತ್ತಾರೆ. 5 ಮತ್ತು 6 ನೇ ಆರೋಪಿತರು ನ್ಯಾಯಾಲಯದಲ್ಲಿ ಗೈರು ಹಾಜರಿದ್ದು, ಗುರುತಿಸುವಿಕೆಗೆ 5 ಮತ್ತು 6 ನೇ ಆರೋಪಿತರ ಪರ ವಕೀಲರು ತಕರಾರು ಇರುವುದಿಲ್ಲ.

**<u>ಪಾಟೀ ಸವಾಲು 2 ಮತ್ತು 3 ನೇ ಆರೋಪಿ ಪರ ವಕೀಲರಾದ ಶ್ರೀ ಆರ್.ಎಸ್.ಕೆ ರವರಿಂದಃ-</u>**

ಚಾಸಾ-1 ರವರು ರಾತ್ರಿ 11.15 ರಿಂದ 11.30 ರ ಸುಮಾರಿಗೆ ಬಾತ್ಮಿ ಬಗ್ಗೆ ನಮಗೆ ತಿಳಿಸಿರುತ್ತಾರೆ. ಘಟನಾ ಸ್ಥಳದಿಂದ ನಮ್ಮ ಠಾಣೆಗೆ ಸುಮಾರು ಒಂದುವರೆ ಕಿ.ಮಿ ಅಂತರ ಇರುತ್ತದೆ. ನಮ್ಮ ಠಾಣೆಯಿಂದ ಘಟನಾ ಸ್ಥಳಕ್ಕೆ ಜೀಪಿನಲ್ಲಿ ಹೋಗಲು ಸುಮಾರು 5-10 ನಿಮಿಷ ಬೇಕಾಗುತ್ತದೆ. ನಾವು

ಘಟನಾ ಸ್ಥಳಕ್ಕೆ ಪಂಚರನ್ನು ಸೇರಿ 12 ರಿಂದ 14 ಜನ ಎರಡು ಜೀಪಿನಲ್ಲಿ ಹೋಗಿರುತ್ತೇವೆ. ಜೀಪಿನ ನಂಬರ್ ಅನ್ನು ನನಗೆ ಈಗ ಹೇಳಲು ಆಗುವುದಿಲ್ಲ. ನಾವು ಘಟನಾ ಸ್ಥಳಕ್ಕೆ ಮಧ್ಯರಾತ್ರಿ 12.10 ಕ್ಕೆ ಹೋಗಿದ್ದು, ನಾವು ಠಾಣೆ ಬಿಟ್ಟಾಗ ಮಧ್ಯರಾತ್ರಿ 12.00 ಗಂಟೆ ಆಗಿತ್ತು. ಶ್ರೀ ಶ್ರೀಕಂಠೇಶ್ವರ ಲಾಡ್ಜ್ ನಲ್ಲಿ ಒಟ್ಟು ಎಷ್ಟು ಕೊಠಡಿಗಳು ಇರುತ್ತವೆ ಎಂದು ನನಗೆ ನೆನಪಿಲ್ಲ. ಶ್ರೀ ಶ್ರೀಕಂಠೇಶ್ವರ ಲಾಡ್ಜ್ 3 ಹಂತಸ್ತಿನ ಕಟ್ಟಡವಾಗಿರುತ್ತದೆ. ನೆಲ ಅಂತಸ್ತಿನಲ್ಲಿ ಕೊಠಡಿಗಳು ಇವೆಯೇ ಎಂಬುದರ ಬಗ್ಗೆ ನನಗೆ ನೆನಪಿಲ್ಲ. ಆದರೆ 2 ಮತ್ತು 3 ನೇ ಅಂತಸ್ತಿನಲ್ಲಿ ಕೊಠಡಿಗಳು ಇದ್ದು, ಎಷ್ಟು ಕೊಠಡಿಗಳು ಇವೆ ಎಂದು ನನಗೆ ಗೊತ್ತಿಲ್ಲ. ನಾನು ಘಟನಾ ಸ್ಥಳಕ್ಕೆ ಹೋಗಿಲ್ಲವಾದ ಕಾರಣ ನನಗೆ ಎಷ್ಟು ಕೊಠಡಿಗಳು ಇರುತ್ತವೆ ಎಂದು ನಿಖರವಾಗಿ ಹೇಳಲು ಸಾಧ್ಯವಾಗುತ್ತಿಲ್ಲ ಎಂದರೆ ಸರಿಯಲ್ಲ. ದಾಳಿ ಸಮಯ ನಾವು ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ನಾನು ಹೇಳುವಂತೆ ಯಾವುದೇ ದಾಳಿಗೆ ಹೋಗದೇ ಇದ್ದರೂ ಸಹ ನಮ್ಮ ಮೇಲಾಧಿರಗಳ ಸೂಚನೆ ಮೇರೆಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನಿಪಿ-1 ಕ್ಕೆ ಘಟನಾ ಸ್ಥಳದಲ್ಲಿ ಸಹಿ ಮಾಡಿರುವುದಿಲ್ಲ, ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಹೇಳುವಂತೆ ಸುಮಾರ 14 ಜನರು ದಾಳಿಗೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು 5 ಮತ್ತು 6 ನೇ ಆರೋಪಿ ಪರ ವಕೀಲರಾದ ಶ್ರೀ ಬಿ.ಎನ್.ಎಸ್ ರವರಿಂದಃ-</u>**

ನಿಪಿ-1 ಅನ್ನು ಠಾಣೆಯಲ್ಲಿ ಬರೆಯಲಾಗಿರುತ್ತದೆ ಎಂದರೆ ಸರಿಯಲ್ಲ. ನಮ್ಮೊಂದಿಗೆ ಪಂಚರು ಯಾರು ಬಂದಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಮೇಲಾಧಿಕಾರಿಗಳ ಸೂಚನೆ ಮೇರೆಗೆ ನಿಪಿ-1 ಕ್ಕೆ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹೇಳುವಂತೆ ಲಾಡ್ಜ್ ಬಳಿ ಹೋಗಿರುವುದಿಲ್ಲ ಹಾಗೂ ಆರೋಪಿಗಳನ್ನು ನೋಡಿರುವುದಿಲ್ಲ ಎಂದರೆ ಸರಿಯಲ್ಲ. 5 ನೇ ಆರೋಪಿ ನಮ್ಮಗಳನ್ನು ನೋಡಿ ಓಡಿ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ಯಾರು ಲಾಡ್ಜ್‌ನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

(ಆರೋಪಿ-1 ಮತ್ತು 4 ರವರ ಪರ ವಕೀಲರು ಆರೋಪಿ 2,3,5 ಮತ್ತು 6 ರವರ ವಕೀಲರ ಪಾಟೀ ಸವಾಲನ್ನೇ ಅನುಮೋದಿಸಿರುತ್ತಾರೆ)

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**2 ನೇ ಕಿ.ಪ್ರ.ದ. ನ್ಯಾ. ದಂ. ನಂಜನಗೂಡು**